

# ಕಾವಲು ಮನೆ ಮಾಳ

ಕಾಡುಪ್ರಾಣಿಗಳಿಂದ ಬೆಳೆಗಳನ್ನು ರಕ್ಷಣೆ ಮಾಡುವುದಕ್ಕಾಗಿ ನಿರ್ಮಿಸುತ್ತಿದ್ದ 'ಮಾಳ', ಕೃಷಿ ಸಂಸ್ಕೃತಿಯ ಚೆಲುವು–ಸೃಜನಶೀಲತೆಗೆ ನಿದರ್ಶನದಂತಿದೆ.

■ **ಫಾಲ್ಗುಣ ಗೌಡ, ಅಚವೆ**

"ಮಾಳ'ಕೋಗ್ಯ... 'ಮಾಳ'ದಲ್ಲೇ ಮಲ್ಗ್ಯ... 'ಮಾಳ'ಕೆ ಮಲ್ಗೂಕ್ ಹೋಗ್ಯ..." – ಉತ್ತರ ಕನ್ನಡ ಜಿಲ್ಲೆಯಲ್ಲಿ ಯಾರಾದರೂ ಮನೆಯ ಒಡೆಯನನ್ನು ಕರೆಯಲು ಬಂದರೆ ಈ ಮಾತು ಸರ್ವೇಸಾಮಾನ್ಯ. ಅಕ್ಟೋಬರ್‌ನಲ್ಲಿ ಯಾರ ಜಮೀನಿನಲ್ಲಿ ನೋಡಿದರೂ ಸಾಮಾನ್ಯವಾಗಿ 'ಮಾಳ' ಇದ್ದೇ ಇರುತ್ತದೆ. ಈ ಸಾಂಪ್ರದಾಯಿಕ ಪರಂಪರೆಯನ್ನು ಹಾಲಕ್ಕಿ ಒಕ್ಕಲಿಗರು ಈಗಲೂ ಮುಂದುವರೆಸಿಕೊಂಡು ಬಂದಿದ್ದಾರೆ.

ಬೆಳೆದ ಪೈರಿನ ಜಮೀನನ್ನು ಕಾಡುಪ್ರಾಣಿಗಳಿಂದ ಕಾಪಾಡುವುದಕ್ಕೆ ರೈತರು ಹಿಂದಿನಿಂದಲೂ ಹಲವು ತಂತ್ರಗಳನ್ನು ರೂಢಿಸಿಕೊಂಡಿದ್ದಾರೆ. ಗದ್ದೆ ಬಯಲಲ್ಲಿ ಹುಲ್ಲಿನಿಂದ ಮಾಡಿದ ಮನುಷ್ಯನ ಆಕಾರಕ್ಕೆ ಅಂಗಿ ಮತ್ತು ಪ್ಯಾಂಟ್ ಹಾಕಿ, ತಲೆ ಮೇಲೆ ತೂತು ಮಡಕೆ ಇಟ್ಟು, ಮನುಷ್ಯನ ಮುಖದ ಚಿತ್ರ ಬರೆದು ಬೆರ್ಚಪ್ಪಗಳನ್ನು ಮಾಡಿ ನಿಲ್ಲಿಸುತ್ತಿದ್ದರು. ಕಾಡುಪ್ರಾಣಿಗಳು ಬಂದರೆ ಮನುಷ್ಯನೇ ನಿಂತಿದ್ದಾನೆಂದು ಭಾವಿಸಿ ಓಡಿ ಹೋಗುತ್ತಿದ್ದವು. ಸೀರೆ ಕಟ್ಟಿಯೂ ಬೆಳೆ ರಕ್ಷಿಸಿಕೊಳ್ಳುತ್ತಿದ್ದರು.

ಗದ್ದೆಯ ನೀರು ಹೋಗುವ ಸಣ್ಣ ಗಂಡಿಯಲ್ಲಿ ಬಿದಿರಿನ ಕೊಳಿಯೊಂದನ್ನು ಇಟ್ಟು ಅದು ನೀರು ತುಂಬುತ್ತಿದ್ದಂತೆಯೇ ದೊಡ್ಡಕ್ಕೆ 'ಕುಟ್' ಎಂದು ಸದ್ದಾಗುತ್ತಿತ್ತು. ಇದು ಕೂಡ ಪ್ರಾಣಿಗಳನ್ನು ಹೆದರಿಸುವ ಒಂದು ಉಪಾಯ. ಈ ಎಲ್ಲಾ ಉಪಾಯಗಳು ಗದ್ದೆಯ ಬಯಲ ಮಧ್ಯೆ 'ಮಾಳ'ದ ಜೊತೆಗೆ ಇರುತ್ತಿದ್ದವು.

## 'ಮಾಳ' ಎಂದರೇನು?

'ಮಾಳ' ಗದ್ದೆಯ ಬಯಲಲ್ಲಿರುವ ಸಣ್ಣ ಕಾವಲು ಮನೆ. 'ಗೋಮಾಳ' ಗೋವುಗಳನ್ನು ಕಾಯಲು ಮೇಯಲು ಬಿಟ್ಟ ಜಾಗವಾದರೆ, 'ಮಾಳ' ಹಂದಿಗಳನ್ನು ಕಾಯಲು ಮಾಡಿಕೊಂಡ ಸಣ್ಣ ಮನೆ.

ಗದ್ದೆಯ ಬಯಲ ನಡುವೆ ಎತ್ತರದ ನಾಲ್ಕು ಕಂಬಗಳನ್ನು ಹುಗಿದು, ಅದಕ್ಕೆ ಸಮನಾಗಿ ದಂಡೆಗಳನ್ನು ಕಟ್ಟಿ, ಹುಲ್ಲು ಹೊದಿಸಿ ಮಲಗುವ ವ್ಯವಸ್ಥೆ. ಒಬ್ಬ ಮಾತ್ರ ಅಲ್ಲಿ ಮಲಗಲು ಸ್ಥಳಾವಕಾಶ. ಆತ ಎಚ್ಚರವಾಗಿದ್ದು, ಆಗಾಗ ಔಡ್ (ಬಿದಿರಿನ ದಂಡೆಯನ್ನು ತಂದು ಸಿಗಿದು ಸಣ್ಣ ಕಂಬಗಳ ಸಹಾಯದಿಂದ ಕಟ್ಟಿ, ಅದಕ್ಕೆ ಬೆತ್ತದ ಬಳ್ಳಿ ಕಟ್ಟಿ ಎಳೆದರೆ ದೊಡ್ಡ ಸದ್ದಾಗುತ್ತದೆ) ಎಳೆದು ಸದ್ದು ಮಾಡುತ್ತ ಇದ್ದರೆ ಹಂದಿಗಳು ಬರುವುದಿಲ್ಲ. ಅವುಗಳಿಗೆ ಮನುಷ್ಯನಿದ್ದಾನೆ ಎಂಬ ಖಾತರಿ ಸಿಗುತ್ತದೆ.

ಕೆಲವರು 'ಮಾಳ'ದಿಂದಲೇ ಪಟಾಕಿ, ಗರ್ನಲ್ ಹೊಡೆದು ಬಂದೂಕಿನ ಈಡಿನ ಸದ್ದಿನಂತೆ ಹಂದಿಗಳನ್ನು ಹೆದರಿಸುವುದಿದೆ. ಕೆಲವು ಜೂರ್ಗಾಗಳು (ಸಣ್ಣ ಜಾತಿಯ ಕುಳ್ಳ ಹಂದಿ) ಈ ಯಾವ ಸದ್ದಿಗೂ ಹೆದರುವುದಿಲ್ಲ. ಇವು ಒಂದು ಒಂದೂವರೆ ಅಡಿ ಎತ್ತರವಿದ್ದು ಅಡ್ಡಡ್ಡ ಬೆಳೆದಿರುತ್ತವೆ. ಆದ್ದರಿಂದ ಮಾಳದಲ್ಲಿ ಮಲಗಿದ ಮನುಷ್ಯ ಸದಾ ಎಚ್ಚರಿವಿದ್ದು ಕಾವಲು ಕಾಯಬೇಕಾಗುತ್ತದೆ. ಈ ಸಮಯದಲ್ಲಿ ರೈತರು ಕೇವಲ 15 ದಿನ 'ಮಾಳ' ಕಾಯ್ದರೆ ಹಂದಿಗಳ ದಾಳಿಯಿಂದ ತಪ್ಪಿಸಿಕೊಂಡು ಪೈರು ಹಸನಾಗಿರುತ್ತಿತ್ತು.

'ಮಾಳ' ಎಂದರೆ ಹಂದಿ ಕಾಯುವುದು ಎಂಬ ಮಾತು ರೂಢಿಯಲ್ಲಿದೆ. ಅಂದರೆ ಹಂದಿಗಳು ಬರದಂತೆ ತಡೆಯುವುದು. ಆದರೆ ಕೆಲವರು ನಾರಿನ ಬಳ್ಳಿಯನ್ನು ಹುರಿಗೊಳಿಸಿ ದನಗಳಿಗೆ ಕಟ್ಟುವ 'ದಾಂಬು' ಮಾಡುವುದು, ತರಕು ತರುವ 'ಕಲ್ಲಿ' ಮಾಡುವುದು, ಬೆತ್ತ, ಕೂಗಲ ಬಳ್ಳಿಯಿಂದ ಸಣ್ಣ ಸಣ್ಣ ಬುಟ್ಟಿ ಮಾಡುವುದು ಇಲ್ಲಿಯೇ.

ರೈತರಿಗೆ ಬರೀ ಹಂದಿಯದೇ ಭಯವಲ್ಲ, ಕಡವೆ, ಮುಳ್ಳುಹಂದಿ, ಮೊಲ, ಬರ್ಕ, ಹೆಗ್ಗಣ, ಇಲಿ, ಕೆಲವು ಕಟ್ಟದೆ ಇರುವ ಕಳ್ಳ ದನಗಳ ಕಾಟವೂ ಇರುತ್ತದೆ. ತೆಂಗಿನ ಕೊನೆ, ಅಡಿಕೆ ಕೊನೆ ಕದಿಯಲು ಬರುವ ಜನ ಇರುತ್ತಿದ್ದರು. ಮಾಳದಲ್ಲಿದ್ದ ವ್ಯಕ್ತಿ ಅರ್ಧ ತಾಸಿಗೊಮ್ಮೆ ಟಾರ್ಚ್ ಬಿಟ್ಟರೆ ಪ್ರಾಣಿಗಳಿಗೆ ಮನುಷ್ಯ ಇರುವುದು ಗೊತ್ತಾಗಿ ಬೇಲಿ ದಾಟಿ ಬರುವುದಿಲ್ಲ. ರಾತ್ರಿ ನಿದ್ದೆಗೆಟ್ಟ ವ್ಯಕ್ತಿ ಮಧ್ಯಾಹ್ನ ಮಲಗುವುದು ಇದೇ ಮಾಳದಲ್ಲಿ.

'ಮಾಳ' ಗದ್ದೆಯ ಬಯಲಿನಲ್ಲಿ ಎತ್ತರದಲ್ಲಿ ಕಾಣುವುದರಿಂದ ಇಡಿ ಗದ್ದೆಯ ಬಯಲು 'ಮಾಳ'ದ ವ್ಯಕ್ತಿಯ ಕಣ್ಗಾವಲಿನಲ್ಲಿರುತ್ತದೆ. ಮೊದಲಿನಂತೆ 'ಮಾಳ'ದ ಬಯಲುಗಳು ಕಾಣದಿದ್ದರೂ ಈ ಸಂಸ್ಕೃತಿ ಈಗಲೂ ಜೀವಂತವಾಗಿದೆ. 'ಮಾಳಿದ್ರೆ ಬೆಳೆ, ಮಾಳಿದ್ರೆ ಕೂಳು ಬಾಳು' ಎಂದು ಆಗ ಅಪ್ಪ ಹೇಳುತ್ತಿದ್ದ ಮಾತು ಈಗಲೂ ಸತ್ಯ ಅನಿಸುತ್ತದೆ. ■